ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–24/୨५० /2023–24 ದಿನಾಂಕ:29.11.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 23.11.2023 ರಂದು ಜರುಗಿದ ಸಿಂಡಿಕೇಟ್ 24ನೇ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 23.11.2023 ರಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟ್ 24ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಸಿಂಡಿಕೇಟ್/24ನೇ ಸಾಮಾನ್ಯ/೨೬೦ /2023–24 ದಿನಾಂಕ: 24.11.2023

ದಿನಾಂಕ 23.11.2023 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ 24ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಶ್ರೀ ಕೆ.ಎಂ. ಸುರೇಶ್ ಕುಮಾರ್<br>ತಾಂತ್ರಿಕ ಶಿಕ್ಷಣ ನಿರ್ದೇಶಕರು, | ಸದಸ್ಯರು |
| 3. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 4. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 5. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 6. | ಡಾ. ಸಿ. ಎಂ. ನವೀನ್‌ಕುಮಾರ್ | ಸದಸ್ಯರು |
| 7. | ಶ್ರೀ. ರಮೇಶ್ ನಾರಾಯಣ್ ರಾವ್ | ಸದಸ್ಯರು |
| 8. | ಡಾ. ಪ್ರೇಮ | ಸದಸ್ಯರು |
| 9. | ಡಾ. ಪಂಕಜ್ ಚೌಧರಿ | ಸದಸ್ಯರು |
| 10. | ಡಾ. ಪಿ. ಆರ್. ಚೇತನಾ | ಸದಸ್ಯರು |
| 11. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 12. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಸಭಾಧ್ಯಕ್ಷರನ್ನು ವಿನಂತಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಮಾನ್ಯ ಕುಲಪತಿಗಳು ಸಂಕ್ಷಿಪ್ತ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

ಪ್ರಮುಖವಾಗಿ, 2022-23ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರ, 2021-22ನೇ ಸಾಲಿನ ವಾರ್ಷಿಕ ವರದಿ, 2016-17 ರಿಂದ 2018-19 ಮತ್ತು 2019-20ನೇ ಸಾಲಿನ 2 ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಮತ್ತು ಕೆಲವು ಆಡಳಿತಾತ್ಮಕ ವಿಷಯಗಳ ಕುರಿತು ಚರ್ಚೆ ಹಾಗೂ ಅನುಮೋದನೆಗಾಗಿ ಈ ಸಭೆಯನ್ನು ಕರೆಯಲಾಗಿದೆ.

ಅದಕ್ಕೂ ಪೂರ್ವದಲ್ಲಿ ಕಳೆದ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ವಿವರ ಕೆಳಗಿನಂತಿದೆ.

1. ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಾಗಿ, ರಾಜ್ಯ ಸರ್ಕಾರದ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಜಂಟಿ ನಿರ್ದೇಶಕಿಯಾಗಿರುವ ಶ್ರೀಮತಿ ಎಂ. ವಿ. ವಿಜಯಲಕ್ಷ್ಮಿ ರವರು ದಿನಾಂಕ 16.11.2023 ರಂದು ಹಣಕಾಸು ಅಧಿಕಾರಿಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಅವರನ್ನು ಈ ಸಭೆಯಲ್ಲಿ ಉಪಸ್ಥಿತರಿರಲು ತಿಳಿಸಲಾಗಿದೆ. ಅವರನ್ನು ಸಹ ಈ ಸಭೆಗೆ ಸ್ವಾಗತಿಸುತ್ತೇನೆ. ಇದುವರೆಗೆ ಪ್ರಭಾರ ಹಣಕಾಸು ಅಧಿಕಾರಿಗಳಾಗಿ ಸೇವೆ ಸಲ್ಲಿಸಿರುವ ಡಾ. ಕೆ. ಆರ್. ಜಲಜಾ, ವಾಣಿಜ್ಯ ನಿಕಾಯದ ಡೀನರು ಹಾಗೂ ವಿಭಾಗದ ಮುಖ್ಯಸ್ಥರು ಅವರ ಸೇವೆಯನ್ನು ಸ್ಮರಿಸಿ ಗೌರವಿಸಲಾಗುವುದು.

2. ಕಳೆದ ಒಂದು ವರ್ಷಗಳಿಂದ ಸಿಂಡಿಕೇಟ್ ಸದಸ್ಯರಾಗಿದ್ದ ಪ್ರಾಂಶುಪಾಲರಾದ (1) ಶ್ರೀ. ಎಂ. ಸತೀಶ, ಪ್ರಾಂಶುಪಾಲರು, ವಿದ್ಯಾಸಂಸ್ಕಾರ ಮಹಾವಿದ್ಯಾಲಯ, (2) ಪ್ರೊ. ಕೆ.ಎಂ. ಮಹೇಶ, ಪ್ರಾಂಶುಪಾಲರು, ಮಹಾವೀರ್ ಜೈನ್ ಸಂಜೆ ಕಾಲೇಜು, (3) ಡಾ. ಎಸ್.ಎನ್. ವೆಂಕಟೇಶ, ಪ್ರಾಂಶುಪಾಲರು, ಶೇಷಾದ್ರಿಪುರಂ ಮಹಾವಿದ್ಯಾಲಯ, ಯಲಹಂಕ ರವರು ತಮ್ಮ ಸದಸ್ಯತ್ವದ ಅವಧಿ ಪೂರ್ಣಗೊಳಿಸಿದ್ದು, ಅವರು ತಮ್ಮ ಸದಸ್ಯತ್ವದ ಅವಧಿಯಲ್ಲಿ ನೀಡಿದ ರಚನಾತ್ಮಕ ಸಲಹೆ ಸೂಚನೆಗಳನ್ನು ಗೌರವದಿಂದ ಸ್ಮರಿಸಲಾಗುವುದು. ಈ ಸಿಂಡಿಕೇಟ್ ಸಭೆ ಮುಗಿದ ನಂತರ ಇವರನ್ನು ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. ಹೊಸದಾಗಿ ನಾಮನಿರ್ದೇಶನ ಹೊಂದಿದ ಪ್ರಾಂಶುಪಾಲರಾದ (1) ಪ್ರೊ. ರಮೇಶ ನಾರಾಯಣರಾವ್, ಪ್ರಾಂಶುಪಾಲರು, ಆಚಾರ್ಯ ಸ್ಕೂಲ್ ಆಫ್ ಡಿಸೈನ್, (2) ಡಾ. ಪ್ರೇಮಾ, ಪ್ರಾಂಶುಪಾಲರು, ಸೇಂಟ್ ಆನ್ಸ್ ಕಾಲೇಜು, (3) ಡಾ. ಪಂಕಜ್ ಚೌಧರಿ, ಪ್ರಾಂಶುಪಾಲರು, ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

3. ದಿನಾಂಕ 02.10.2023 ರಂದು ಮಹಾತ್ಮ ಗಾಂಧಿ ಜಯಂತಿಯನ್ನು ಆಚರಿಸಿ, ಇದೇ ಸಂದರ್ಭದಲ್ಲಿ ಕ್ಯಾಂಪಸ್ ಸ್ವಚ್ಛತೆಗಾಗಿ ಶ್ರಮದಾನವನ್ನು ಮಾಡಲಾಯಿತು.

4. ದಿನಾಂಕ 07.10.2023 ರಂದು ಮತ್ತು 10.10.2023 ರಂದು ಜಾಗತಿಕ ಭಾಷೆಗಳ ವಿದ್ಯಾರ್ಥಿಗಳ ವ್ಯಾಸಂಗದ ಪ್ರಾರಂಭ ಹಾಗೂ ವೃತ್ತಿಪರರಿಗಾಗಿ ಜಪಾನ್ ಭಾಷೆಯ ಸ್ನಾತಕ ಡಿಪ್ಲೋಮಾ ವ್ಯಾಸಂಗ ಪ್ರಾರಂಭಿಸಲಾಯಿತು.

5. ದಿನಾಂಕ 10.11.2023 ರಿಂದ 27.11.2023ರ ವರೆಗೆ ವಿವಿಧ ವಿಭಾಗಗಳಿಗೆ ಅಗತ್ಯವಾದ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನಗಳನ್ನು ಜರುಗಿಸಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಮಾಡಲಾಗಿದೆ.

6. ದಿನಾಂಕ 06.11.2023ರಂದು ನವದೆಹಲಿಯ ಎನ್.ಐ.ಇ.ಪಿ.ಎ. (ನ್ಯೂಪಾ) ವಿಶ್ವವಿದ್ಯಾನಿಲಯದಲ್ಲಿ ಜರುಗಿದ National Workshop on Leadership Development for Deans of Faculty and Heads of Departments of Universities ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ

ಪಾಲ್ಗೊಂಡು "Institution Building, Reflection from leaders of Higher Education Institutions" ಪ್ಯಾನೆಲ್ ಚರ್ಚೆಯಲ್ಲಿ ಭಾಗವಹಿಸಲಾಯಿತು.

7. ದಿನಾಂಕ: 17.11.2023 ರಂದು ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಜರುಗಿದ ರಾಜ್ಯ ಶಿಕ್ಷಣ ಆಯೋಗದ ವರ್ಕಿಂಗ್ ಗ್ರೂಪ್ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು. ಅದರಂತೆ ಸಭೆಯಲ್ಲಿ ಭಾಗವಹಿಸಿ ರಚನಾತ್ಮಕ ಸಲಹೆಗಳನ್ನು ನೀಡಲಾಯಿತು. ಈ ವಿಷಯದ ಕುರಿತು ಚರ್ಚೆಗಾಗಿ ಡಿಸೆಂಬರ್ ಮೊದಲ ವಾರದಲ್ಲಿ, ಬೆಂಗಳೂರು ವಲಯದ ವಿಶ್ವವಿದ್ಯಾನಿಲಯಗಳ ಕುಲಪತಿಗಳ, ಪ್ರಾಂಶುಪಾಲರ ಹಾಗೂ ಇತರ ಪ್ರತಿನಿದಿಗಳನ್ನು ಸಭೆಯನ್ನು ಆಯೋಜಿಸುವ ಜವಾಬ್ದಾರಿಯನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ನೀಡಿರುತ್ತಾರೆ. ಅದರಂತೆ ಕ್ರಮವಹಿಸಲಾಗುವುದು.

8. ದಿನಾಂಕ 21.11.2023ರಂದು ವಿದ್ಯಾವಿಷಯಕ ಪರಿಷತ್ ಸಭೆ ಜರುಗಿದ್ದು ಅದರಲ್ಲಿ ಇಂದಿನ ಸಭೆಯ ಹಲವಾರು ವಿಷಯಗಳ ಕುರಿತು ಚರ್ಚೆ ನಡೆಸಿ ಶಿಫಾರಸ್ಸುಗಳನ್ನು ಮಾಡಲಾಗಿದೆ.

ಮೇಲಿನ ವರದಿಯ ನಂತರ ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ಸೂಚಿಸಿದರು.

ವಿಷಯ ಸಂಖ್ಯೆ: 01

ವಿಷಯ: ದಿನಾಂಕ 27.09.2023 ರಂದು ಜರುಗಿದ ಸಿಂಡಿಕೇಟ್ 23ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ

***ವಿವರಣೆ:***

ಸದಸ್ಯರಾದ ಶ್ರೀ ಎಂ.ವಿ.ರಂಗಪ್ಪನವರು, ಕಳೆದ ಸಭೆಯಲ್ಲಿ ಮಾಹಿತಿ ನೀಡಿದ ಪ್ರಕಾರ, ವಿವಿಧ ಮಹಾವಿದ್ಯಾಲಯಗಳ ಸಂಯೋಜನೆಗೆ ಸಂಬಂಧಿಸಿದಂತೆ, ಒಟ್ಟು ಎಷ್ಟು ಮಹಾವಿದ್ಯಾಲಯಗಳ ಸಂಯೋಜನೆ ಅಧಿಸೂಚನೆಗಳನ್ನು ಹೊರಡಿಸಲಾಗಿದೆ, ಹಾಗೂ ಇನ್ನೂ ಎಷ್ಟು ಮಹಾವಿದ್ಯಾಲಗಳು ಬಾಕಿ ಇವೆ ಎಂಬುದರ ಕುರಿತು ವಿವರ ಬಯಸಿದರು. ಕುಲಸಚಿವರು ಮಾಹಿತಿ ನೀಡಿ, ಹೆಚ್ಚಿನ ಸಂಖ್ಯೆಯ ಮಹಾವಿದ್ಯಾಲಯಗಳ ಸಂಯೋಜನೆ ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ತಾಂತ್ರಿಕ ಕಾರಣಗಳಿಂದ ಕೆಲವು ಕಾಲೇಜುಗಳಿಗೆ ಅಧಿಸೂಚನೆ ಹೊರಡಿಸುವಲ್ಲಿ ವಿಳಂಬವಾಗಿದೆ, ಆ ಕಾಲೇಜುಗಳಿಗೂ ಅತಿ ಶೀಘ್ರದಲ್ಲಿ ಹೊರಡಿಸಲಾಗುವುದು ಎಂದು ಹೇಳಿದರು.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 27.09.2023 ರಂದು ಜರುಗಿದ ಸಿಂಡಿಕೇಟ್ 23ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಗೆ ಅನುಮೋದನೆ ನೀಡಲಾಯಿತು.**

**ಸಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಮುಂಬಡ್ತಿ ಕುರಿತು ಸದಸ್ಯರು ಮಾಹಿತಿ ಬಯಸಲು, ಈ ಕುರಿತು ಅಗತ್ಯ ಕ್ರಮ ವಹಿಸಲಾಗಿದೆ, ಶಿಕ್ಷಕೇತರ ಸಿಬ್ಬಂದಿಗಳ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ದಿನಾಂಕವನ್ನು ಪಡೆದು ನಿಗದಿಪಡಿಸಬೇಕಾಗಿದೆ. ಬೋಧಕರ ಬಡ್ತಿ ಕುರಿತಂತೆ, ಅರ್ಜಿಗಳ ಪರಿಶೀಲನೆಯ ಕ್ರಮ ಪ್ರಗತಿಯಲ್ಲಿದೆ ಎಂದು ಸಭೆಗೆ ತಿಳಿಸಲಾಯಿತು.**

ವಿಷಯ ಸಂಖ್ಯೆ: 2

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ವಾರ್ಷಿಕ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗೆ ಮಂಡಿಸುವ ಕುರಿತು.

*ಪರಾಮರ್ಶಕ ಟಿಪ್ಪಣಿ*

ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಮತ್ತು ಸಂಯೋಜಿತ ಕಾಲೇಜುಗಳಿಂದ ಸ್ವೀಕರಿಸಲಾದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ, ಸಿದ್ಧಪಡಿಸಿರುವ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಅನುಚ್ಛೇಧ 50(1)ರ ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

ಮಾನ್ಯ ಕುಲಪತಿಗಳ ಮುನ್ನುಡಿಯೊಂದಿಗೆ ಪ್ರಾರಂಭವಾಗಿ ಆಶಯಗಳೊಂದಿಗೆ ಮುಕ್ತಾಯವಾಗುವ 49 ಅಧ್ಯಾಯಗಳ ವಾರ್ಷಿಕ ವರದಿಯ ಸ್ಥೂಲವಾದ ವಿವರಗಳನ್ನು ಸಭೆಗೆ ನೀಡಿದರು. ವಾರ್ಷಿಕ ವರದಿಯ ಮಹತ್ವ ಹಾಗೂ ಅದು ಒಳಗೊಂಡಿರುವ ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳ ವಿವರ, ವಿಶ್ವವಿದ್ಯಾಲಯದ ಕಟ್ಟಡಗಳ ನವೀಕರಣ, ವಿಭಾಗ / ಕಛೇರಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದು, ಗ್ರಂಥಾಲಯ ಆಧುನೀಕರಣ, ವಿವಿಧ ಸಂಘ ಸಂಸ್ಥೆಗಳು ಮತ್ತು ಅಂತರ್‌ರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಅಂಶಗಳೊಂದಿಗೆ ಪ್ರವೇಶ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದ ಇನ್ನಿತರ ಸಾಂಖಿಕ ವಿವರಗಳನ್ನು ವಾರ್ಷಿಕ ವರದಿ ಒಳಗೊಂಡಿದೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ವ್ಯಾಸಂಗ ಪ್ರಾರಂಭಿಸಿರುವುದು ಮುಂಬರುವ ದಿನಗಳ ಬಹು ದೊಡ್ಡ ಭರವಸೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

*ಸಿಂಡಿಕೇಟ್ ತೀರ್ಮಾನ:*

**ವಿದ್ಯಾವಿಷಯಕ ಪರಿಷತ್ ಅನುಮೋದಿಸಿರುವ ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸಿ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 3**

ವಿಷಯ: 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿದ್ದು, ಅವುಗಳ ಪರಿಶೀಲನೆ ಹಾಗೂ ಅನುಮೋದನೆ.

*ಪರಾಮರ್ಶಕ ಟಿಪ್ಪಣಿ:*

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ 47(1) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ನಿರ್ದೇಶನದಂತೆ ಸಿದ್ಧಪಡಿಸಬೇಕಾಗಿದ್ದು, ಅದರಂತೆ,

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಮೇಲೆ ನಮೂದಿಸಿದ ಅಧಿನಿಯಮದ ಪ್ರಕರಣ 32(2) ರ ಪ್ರಕಾರ 2022-23 ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ದಿನಾಂಕ 09.11.2023 ರಂದು ಜರುಗಿದ ಹಣಕಾಸು ಸಮಿತಿ ಸಭೆ ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ. ಹಣಕಾಸು ಸಮಿತಿ ಸಭೆಯ ತೀರ್ಮಾನವು ಕೆಳಗಿನಂತಿದೆ.

2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಸ್ವೀಕೃತಿ ಹಾಗೂ ವೆಚ್ಚಗಳ ಕುರಿತು ಸದಸ್ಯರು ಕೇಳಿದ ವಿವರಣೆಗಳನ್ನು ಒದಗಿಸಲಾಯಿತು. ವಾರ್ಷಿಕ ಲೆಕ್ಕ ಪತ್ರಗಳ ಶೀರ್ಷಿಕೆಗಳ ಹೆಚ್ಚಿನ ವಿವರಗಳನ್ನು ನೀಡಬೇಕೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಚರ್ಚೆಯ ನಂತರ 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿ ಕೂಲಂಕುಷವಾಗಿ ಪರಿಶೀಲಿಸಿ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47 ಪ್ರಕಾರ ಹಣಕಾಸು ಸಮಿತಿ ಸಭೆಯ ಮತ್ತು ದಿನಾಂಕ 21.11.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳು ಅನುಮೋದಿಸಿದ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಶೀಲಿಸಿ ಅನುಮೋದಿಸಿರುವ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಸಭೆ ಪರಿಶೀಲಿಸಿ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 4**

ವಿಷಯ: 2016-17 ರಿಂದ 2018-19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯ 2017 ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ಕ್ಕೆ ತಿದ್ದುಪಡಿ ತರುವ ಮೂಲಕ ಅಸ್ತಿತ್ವಕ್ಕೆ ಬಂದಿದ್ದು, 2018-19ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ರ

ಪ್ರಕರಣ 47(3) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಪ್ರಧಾನ ನಿರ್ದೇಶಕರು ನಿರ್ವಹಿಸಿ ವರದಿಯನ್ನು ಬಿಡುಗಡೆ ಮಾಡಬೇಕಾಗುತ್ತದೆ. ಅದರಂತೆ, 2016-17 ರಿಂದ 2018-19ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಯನ್ನು ಕೈಗೊಂಡು ಅಂತಿಮ ವರದಿಯನ್ನು ದಿನಾಂಕ 20.01.2021 ರಂದು ಬಿಡುಗಡೆ ಮಾಡಿದ್ದಾರೆ. ಸದರಿ ವರದಿಯ ವಿವಿಧ ಕಂಡಿಕೆಗಳನ್ನು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ನೀಡಿ ಅವರಿಂದ ಅನುಪಾಲನಾ ವರದಿ ಹಾಗೂ ಅವುಗಳಿಗೆ ಪೂರಕವಾದ ಅನುಬಂಧಗಳನ್ನು ಪಡೆದು ಕ್ರೋಢೀಕರಿಸಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ, ದಿನಾಂಕ 19.01.2022 ರಂದು ಪ್ರಾದೇಶಿಕ ನಿರ್ದೇಶಕರು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ. ಅವರಿಂದ ತೀರುವಳಿ ಕುರಿತು ಯಾವ ಮಾಹಿತಿ ಬಂದಿರುವುದಿಲ್ಲ.

ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂ. ರಾಲೆಪ/ಲೆಪವಿ/03/24/ಇತರೆ/2021-22/85 ದಿನಾಂಕ 10.04.2023ರ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂ.ಶಿಇ/83/ಈಎಫ್‌ಬಿ/2023 ದಿನಾಂಕ 29-05-2023 ರ ಪ್ರಕಾರ, ವಿಶ್ವವಿದ್ಯಾಲಯಗಳ ಅಡಹಾಕ್ ಸಮಿತಿಗಳಿಗೆ ಕುಲಪತಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿ ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆಗಳಿಗೆ ತೀರುವಳಿ ಕುರಿತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಆದೇಶಗಳಾನುಸಾರ ಕ್ರಮವಹಿಸಿ, ಹಣಕಾಸು ಸಮಿತಿ ಮತ್ತು ಸಿಂಡಿಕೇಟ್‌ಗಳ ಸಭೆಗಳ ಅನುಮೋದನೆ ಪಡೆದು ಕಂಡಿಕೆಗಳ ತೀರುವಳಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ವಿಶ್ವವಿದ್ಯಾಲಯದಲ್ಲಿ ಬಾಕಿ ಇರುವ ಕಂಡಿಕೆಗಳ ತೀರುವಳಿಗೆ ಸಂಬಂಧಿಸಿದಂತೆ ನಂತರ ಕ್ರಮವಹಿಸಲಾಗುವುದು.

ವಿಶ್ವವಿದ್ಯಾನಿಲಯದ 2016-17 ರಿಂದ 2018-19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ದಿನಾಂಕ 9.11.2023 ರಂದು ಜರುಗಿದ ಹಣಕಾಸು ಸಮಿತಿ ಸಭೆ ಪರಿಶೀಲಿಸಿ ಕೆಳಗಿನಂತೆ ತೀರ್ಮಾನಿಸಿದೆ.

2016-17 ರಿಂದ 2018-19 ವರೆಗಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ಹಣಕಾಸು ಸಮಿತಿ ವಿವರವಾಗಿ ಪರಿಶೀಲಿಸಿ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

1. ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ದಾಖಲೆಗಳ ನಿರ್ವಹಣೆ, ಸ್ಥಿರಾತಿ ಮತ್ತು ಚರಾಸ್ತಿಗಳ ವಹಿ ನಿರ್ವಹಿಸುವ ಕುರಿತು ಸಲಹೆ ಸೂಚನೆಗಳನ್ನು ನೀಡಿರುವುದು ಅವುಗಳನ್ನು ಪಾಲಿಸಲು ಮತ್ತು ಆಯವ್ಯಯ ಅಂದಾಜುಗಳನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಲು ರಚನಾತ್ಮಕವಾದ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಿದ್ದು ಅವುಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಹಣಕಾಸು ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿತು.

2. ವರದಿಯ ಖಂಡಿಕೆಗಳಲ್ಲಿ ಆಕ್ಷೇಪಣೆಯಲ್ಲಿಟ್ಟ ಮೊತ್ತ ಮತ್ತು ವಸೂಲಾತಿಗಾಗಿ ಸೂಚಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲೆ/ಕಡತ/ಸರ್ಕಾರಿ ಆದೇಶ/ ನಿಯಮಾವಳಿಗಳನ್ನು ಅಡಹಾಕ್ ಸಮಿತಿಯ ಎದುರಿಗೆ ಮಂಡಿಸಿ, ಆಕ್ಷೇಪಣೆಯಲ್ಲಿಟ್ಟ ಮೊತ್ತ ಮತ್ತು ವಸೂಲಾತಿಗಾಗಿ ಸೂಚಿಸಿದ ಮೊತ್ತಗಳ ತೀರುವಳಿಗಾಗಿ ನಿಯಮಾವಳಿಗಳ ಪ್ರಕಾರ ಕ್ರಮವಹಿಸಬೇಕೆಂದು ಸೂಚಿಸಲಾಯಿತು.

3. ಸಂಯೋಜನಾ ಶುಲ್ಕ ಕುರಿತಂತೆ ಮಂಗಳೂರು ವಿಶ್ವವಿದ್ಯಾಲಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಸಂಯೋಜನಾ ಶುಲ್ಕಕ್ಕೆ ಜಿ.ಎಸ್.ಟಿ. ಅನ್ವಯವಾಗುವುದಿಲ್ಲವೆಂಬ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಜಿ.ಎಸ್.ಟಿ. ಅಧಿಕಾರಿಗಳ ಮತ್ತು ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯ ಹಾಗೂ ಗಮನಕ್ಕೆ ತಂದು ತತ್ಸಂಬಂಧದ ಆಕ್ಷೇಪಣೆ ಮತ್ತು ವಸೂಲಾತಿಯನ್ನು ಕೈಬಿಡಲು ವಿನಂತಿಸಬೇಕೆಂದು ಸಭೆ ಅಭಿಪ್ರಾಯ ಪಟ್ಟಿತು.

4. ಇನ್ನೂ ಮುಂದೆ ಪ್ರತಿ ಮೂರು ತಿಂಗಳಿಗೆ ಒಮ್ಮೆ ಮಾಸಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಹಣಕಾಸು ಸಮಿತಿಯ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಯಿತು.

5. ಪರಿಶಿಷ್ಟ ಜಾತಿ / ಪಂಗಡಗಳ ವಿದ್ಯಾರ್ಥಿಗಳ ಶುಲ್ಕ ಮರು ಸಂದಾಯ ಕುರಿತಂತೆ ಸರ್ಕಾರ ಇ-ರೂಪೇ ಯೋಜನೆ ಜಾರಿಗೆ ತರುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಮಾನ್ಯ ಸದಸ್ಯರು ತಿಳಿಸಿದರು. ಇದರಿಂದಾಗಿ ಪರಿಶಿಷ್ಟ ಜಾತಿ / ಪಂಗಡಗಳ ವಿದ್ಯಾರ್ಥಿಗಳ ಶುಲ್ಕ ಅವರ ಖಾತೆಗೆ ವರ್ಗಾವಣೆ ಆಗುವುದರ ಜೊತೆಗೆ ವಿಶ್ವವಿದ್ಯಾಲಯ / ಕಾಲೇಜುಗಳಿಗೆ ಅನ್ವಯವಾಗುವ ಶುಲ್ಕದ ಮೊತ್ತ ನೇರವಾಗಿ ಆಯಾಯ ವಿಶ್ವವಿದ್ಯಾಲಯಗಳ / ಕಾಲೇಜುಗಳ ಖಾತೆಗೆ ವರ್ಗಾವಣೆ ಆಗುತ್ತದೆ ಎಂದು ಹೇಳಿದರು.

ಮೇಲಿನ ಅಭಿಪ್ರಾಯಗಳೊಂದಿಗೆ 2016-17 ರಿಂದ 2018-19 ವರೆಗಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿ ಹಾಗೂ ಅನುಬಂಧಗಳಿಗೆ ಹಣಕಾಸು ಸಮಿತಿ ಸರ್ವಾನುಮತದ ಅನುಮೋದನೆ ನೀಡಿ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಪರಿಶೀಲನೆಗೆ ಶಿಫಾರಸ್ಸು ಮಾಡಲು ಸಭೆ ಅನುಮೋದನೆ ನೀಡಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47(3) ರ ಪ್ರಕಾರ ಹಣಕಾಸು ಸಮಿತಿ ಮತ್ತು ದಿನಾಂಕ 21.11.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳು ಅನುಮೋದಿಸಿದ 2016-17 ರಿಂದ 2018-19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

ಮಾನ್ಯ ಕುಲಪತಿಗಳು ಲೆಕ್ಕ ಪರಿಶೋಧನಾ ವರದಿ ಕುರಿತು ಮಾಹಿತಿ ನೀಡಿ, ಈ ವರದಿ ವಿಶ್ವವಿದ್ಯಾನಿಲಯ ಕಾರ್ಯ ಪ್ರಾರಂಭದ ಪೂರ್ವದ ಅವಧಿಯಾದ 2016-17ನೇ ವರ್ಷವನ್ನು ಒಳಗೊಂಡಿದೆ. ವಾಸ್ತವಾಗಿ ವಿಶ್ವವಿದ್ಯಾನಿಲಯ 01.07.2017 ರಿಂದ ಕಾರ್ಯ ಅಸ್ತಿತ್ವಕ್ಕೆ ಬಂದಿದ್ದು 2018-19 ರಿಂದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಹೀಗಾಗಿ 2016-17 ಮತ್ತು 2017-18ರಲ್ಲಿ ಲೆಕ್ಕ ಪತ್ರಗಳ ವ್ಯವಹಾರ ಅತಂತ್ಯ ಕಡಿಮೆಯಾಗಿದ್ದು 2018-19ರಿಂದ ಶುಲ್ಕ ವಸೂಲಾತಿ ಇತ್ಯಾದಿ ಆದಾಯ ಹಾಗೂ ವಿಶ್ವವಿದ್ಯಾನಿಲಯದ

ನಿರ್ವಹಣೆಯ ವೆಚ್ಚಗಳು ಪ್ರಾರಂಭವಾಗಿರುತ್ತವೆ ಎಂದು ಹೇಳಿದರು. ವರದಿಯಲ್ಲಿ ಸೂಚಿಸಲಾದ ಆಕ್ಷೇಪಣೆ ಹಾಗೂ ವಸೂಲಾತಿಯ ಕಂಡಿಕೆಗಳನ್ನು ಅಡ್ ಹಾಕ್ ಸಮಿತಿ ಮುಂದೆ ಮಂಡಿಸಿ ಅಗತ್ಯವಾದ ದಾಖಲೆ ಹಾಗೂ ಮಾಹಿತಿಗಳನ್ನು ಸಮಿತಿಗೆ ನೀಡಿ ಕಂಡಿಕೆಗಳ ತೀರುವಳಿಗಾಗಿ ಪ್ರಸ್ತಾಪಿಸಲಾಗುವುದು. ಹೆಚ್ಚಿನ ಆಕ್ಷೇಪಣೆಗಳು ದಾಖಲೆ ನಿರ್ವಹಣೆ, ವಿದಿ ವಿಧಾನಗಳ ಪಾಲನೆ ಕುರಿತಾಗಿದ್ದು ಅವುಗಳನ್ನು ಅಡ್ ಹಾಕ್ ಸಮಿತಿಗೆ ಒದಗಿಸಿ ತೀರುವಳಿಗಾಗಿ ಪ್ರಯತ್ನಿಸಲಾಗುವುದು ಎಂದು ಹೇಳಿದರು.

*ಸಿಂಡಿಕೇಟ್ ತೀರ್ಮಾನ:*

**ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಶೀಲಿಸಿ ಶಿಫಾರಸ್ಸು ಮಾಡಿರುವ 2016-17 ರಿಂದ 2018-19ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಗೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 5**

ವಿಷಯ: 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯ 2017ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ಕ್ಕೆ ತಿದ್ದುಪಡಿ ತರುವ ಮೂಲಕ ಅಸ್ತಿತ್ವಕ್ಕೆ ಬಂದಿದ್ದು, 2018-19ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ರ ಪ್ರಕರಣ 47(3) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಪ್ರಧಾನ ನಿರ್ದೇಶಕರು ನಿರ್ವಹಿಸಿ ವರದಿಯನ್ನು ಬಿಡುಗಡೆ ಮಾಡಬೇಕಾಗುತ್ತದೆ. ಅದರಂತೆ, 2018-19ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಯನ್ನು ಕೈಗೊಂಡು ದಿನಾಂಕ 17.08.2022 ರಂದು ವರದಿಯನ್ನು ಬಿಡುಗಡೆ ಮಾಡಿದ್ದಾರೆ. ಸದರಿ ವರದಿಯ ವಿವಿಧ ಕಂಡಿಕೆಗಳಿಗೆ ವಿವಿಧ ವಿಭಾಗಗಳಿಂದ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ಪಡೆದು ಅವುಗಳನ್ನು ಕ್ರೋಢೀಕರಿಸಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಲಾಗಿದೆ.

ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂ. ರಾಲೆಪ/ಲೆಪವಿ/03/24/ಇತರೆ/2021-22/85 ದಿನಾಂಕ 10.04.2023ರ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂ.ಶಿಇ/83/ಈಎಫ್‌ಬಿ/2023 ದಿನಾಂಕ 29-05-2023 ರ ಪ್ರಕಾರ ವಿಶ್ವವಿದ್ಯಾಲಯಗಳ ಅಡಹಾಕ್ ಸಮಿತಿಗಳಿಗೆ ಕುಲಪತಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿ ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆಗಳ

ತೀರುವಳಿ ಕುರಿತು, ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಆದೇಶಗಳನುಸಾರ ಕ್ರಮವಹಿಸಿ, ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದು ಲೆಕ್ಕಪರಿಸೋಧನಾ ವರದಿಯ ಕಂಡಿಕೆಗಳ ತೀರುವಳಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಬಾಕಿ ಇರುವ ಲೆಕ್ಕಪರಿಶೋಧನಾ ಕಂಡಿಕೆಗಳ ತೀರುವಳಿ ಕುರಿತು ನಂತರ ಕ್ರಮವಹಿಸಲಾಗುವುದು.

ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ದಿನಾಂಕ 9.11.2023 ಜರುಗಿದ ಹಣಕಾಸು ಸಮಿತಿ ಸಭೆ ಪರಿಶೀಲಿಸಿ ಕೆಳಗಿನಂತೆ ತೀರ್ಮಾನಿಸಿದೆ.

2019-20 ವರೆಗಿನ ವಾರ್ಷಿಕ ಲೆಕ್ಕ ಪರಿಕೋಧನಾ ವರದಿಯ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ಹಣಕಾಸು ಸಮಿತಿ ವಿವರವಾಗಿ ಪರಿಶೀಲಿಸಿ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

i. ಲೆಕ್ಕ ಪತ್ರಗಳ ನಿರ್ವಹಣೆ ಕುರಿತಂತೆ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿಸಲಾದ ರಚನಾತ್ಮಕವಾದ ಸಲಹೆ ಸೂಚನೆಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಸಭೆ ಅಭಿಪ್ರಾಯ ವ್ಯಕ್ತಪಡಿಸಿತು.
ii. ವರದಿಯ ಖಂಡಿಕೆಗಳಲ್ಲಿ ಪ್ರಸ್ತಾಪಿಸಲಾದ ಆಕ್ಷೇಪಣೆಯ ಮತ್ತು ವಸೂಲಾತಿಯ ಮೊತ್ತಗಳಿಗೆ ಸಂಬಂಧಿಸಿದಂತೆ ವಿವರಣೆಗಳೊಂದಿಗೆ ಅಗತ್ಯ ದಾಖಲೆ/ ಕಡತ/ ಸರ್ಕಾರಿ ಆದೇಶ/ ನಿಯಮಾವಳಿಗಳನ್ನು ಅಡಹಾಕ್ ಸಮಿತಿಯ ಎದುರಿಗೆ ಮಂಡಿಸಿ, ಆಕ್ಷೇಪಣೆಯಲ್ಲಿಟ್ಟ ಮತ್ತು ವಸೂಲಾತಿಗಾಗಿ ಸೂಚಿಸಿದ ಮೊತ್ತಗಳ ತೀರುವಳಿಗಾಗಿ ನಿಯಮಾವಳಿಗಳ ಪ್ರಕಾರ ಕ್ರಮವಹಿಸಬೇಕೆಂದು ಸೂಚಿಸಲಾಯಿತು.

ಮೇಲಿನ ಅಭಿಪ್ರಾಯಗಳೊಂದಿಗೆ 2019-20 ಸಾಲಿನ ವರೆಗಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿ ಹಾಗೂ ಅನುಬಂಧಗಳಿಗೆ ಹಣಕಾಸು ಸಮಿತಿ ಸರ್ವಾನುಮತದ ಅನುಮೋದನೆ ನೀಡಿ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಪರಿಶೀಲನೆಗೆ ಶಿಫಾರಸ್ಸು ಮಾಡಲು ಸಭೆ ಅನುಮೋದನೆ ನೀಡಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47(3) ರ ಪ್ರಕಾರ ಹಣಕಾಸು ಸಮಿತಿ ಮತ್ತು ದಿನಾಂಕ 21.11.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳು ಅನುಮೋದಿಸಿದ 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಶೀಲಿಸಿ ಶಿಫಾರಸ್ಸು ಮಾಡಿರುವ 2019-20ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಗೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 6

ವಿಷಯ: ದಿನಾಂಕ. 04.11.2023 ರಂದು ಜರುಗಿದ ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡವಳಿಗಳು ಅನುಮೋದನೆ ಕುರಿತು.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾಲಯದ ಕೇಂದ್ರೀಯ ಖರೀದಿ ಸಮಿತಿ ಸಭೆಯನ್ನು ದಿನಾಂಕ 04.11.2023 ರಂದು ಜರುಗಿಸಲಾಗಿದೆ. ಸದರಿ ಸಭೆಯಲ್ಲಿ ವಿವಿಧ ಅಧ್ಯಯನ ವಿಭಾಗಗಳಿಗೆ ಅಗತ್ಯವಾಗಿ ಬೇಕಾದ ಪ್ರಯೋಗಾಲಯ ಉಪಕರಣಗಳನ್ನು/ರಸಾಯನಿಕಗಳು, ಗ್ರಂಥಾಲಯ ಸಲಹಾ ಸಮಿತಿ ಶಿಫಾರಸ್ಸುಗಳ ಪ್ರಕಾರ ಗ್ರಂಥಾಲಯಕ್ಕೆ ಅಗತ್ಯವಾದ ಉಪಕರಣಗಳ ಖರೀದಿ ಕುರಿತು ಮಾಡಿದ ಶಿಫಾರಸ್ಸುಗಳನ್ನು ಮಾಡಿರುತ್ತದೆ. ಇದಲ್ಲದೆ ಕಛೇರಿ ಪೀಠೋಪಕರಣಗಳು, ವಿಶ್ವವಿದ್ಯಾನಿಲಯದ ಆವರಣ ಹಾಗೂ ವಿವಿಧ ವಿಭಾಗಗಳ ನಿರ್ವಹಣೆಗಾಗಿ ಸ್ವಚ್ಛತಾ ಕೆಲಸಗಾರರು, ತೋಟಗಾರಿಕೆ ಕೆಲಸಗಾರರು, ಭದ್ರತಾ ಸಿಬ್ಬಂದಿಗಳ ಅಗತ್ಯ ಕುರಿತಂತೆ ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ಶಿಫಾರಸ್ಸುಗಳನ್ನು ಒಳಗೊಂಡಿರುವ ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ವಿವರಣೆ:***

ಸದಸ್ಯರಾದ ಶ್ರೀ. ಎಂ.ವಿ ರಂಗಪ್ಪ ಮತ್ತು ಶ್ರೀ. ಸಮರ್ಥ ಮುನಿರಾಜು ರವರು ಖರೀದಿ ಸಮಿತಿಯ ಮುಂದೆ ಮಂಡಿಸಿದ ವಿವರಗಳನ್ನು ಒದಗಿಸಿದ್ದಲ್ಲಿ ವಿಷಯಗಳನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಕುಲಸಚಿವರು ಅಗತ್ಯ ವಿವರಗಳ ಮಾಹಿತಿಯನ್ನು ನೀಡಿದರು. ಮಾನ್ಯ ಸದಸ್ಯರು ವಿಶ್ವವಿದ್ಯಾನಿಲಯದ ಭದ್ರತೆ ಹಾಗೂ ಸ್ವಚ್ಛತೆ ಕುರಿತು ಅಭಿಪ್ರಾಯ ವ್ಯಕ್ತಪಡಿಸಿ, ಆವರಣದಲ್ಲಿ ಎಲ್ಲ ಕಟ್ಟಡಗಳು ಪುನರ್ ನಿರ್ಮಾಣಗೊಂಡಿದ್ದು, ರಸ್ತೆ, ಉದ್ಯಾನವನಗಳು ಅಭಿವೃದ್ಧಿ ಹೊಂದುತ್ತಿವೆ ಈ ಹಂತದಲ್ಲಿ ವಿಶ್ವವಿದ್ಯಾನಿಲಯದ ಸ್ವಚ್ಛತೆಗಾಗಿ ಹಾಗೂ ಭದ್ರತೆಯನ್ನು ಬಲಪಡಿಸಲು ನಿವೃತ್ತ ಸೈನಿಕರನ್ನು ಒಳಗೊಂಡಂತೆ ಅನುಭವಿ ಸಿಬ್ಬಂದಿಗಳ ಸೇವೆ ಪಡೆದು ಉತ್ತಮ ಭದ್ರತೆ ಹಾಗೂ ಸ್ವಚ್ಛತೆ ಪರಿಣಾಮಕಾರಿಯಾಗಿ ನಿರ್ವಹಿಸಬೇಕೆಂದು ಅಭಿಪ್ರಾಯ ಪಟ್ಟರು.

ಮಾನ್ಯ ಕುಲಪತಿಗಳು ಸದಸ್ಯರ ಆಶಯಗಳಿಗೆ ಸ್ಪಂದಿಸಿ ಪ್ರಸ್ತುತ ಪ್ರಸ್ತಾವನೆ ಅನುಮೋದಿಸಿದಲ್ಲಿ ವಿವಿಧ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ ನಿಯಮಗಳ ಪ್ರಕಾರ ಇ – ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಅದರಲ್ಲಿ ಅನುಭವ ಮತ್ತು ಅರ್ಹತೆ ಹೊಂದಿದ ಸಂಸ್ಥೆಗಳನ್ನು ಪರಿಗಣಿಸಲು ಅವಕಾಶವಿದೆ ಆ ಸಂದರ್ಭದಲ್ಲಿ ಸದಸ್ಯರ ಅಭಿಪ್ರಾಯಗಳನ್ನು ಪರಿಗಣಿಸಿ ಅರ್ಹತೆ ನಿಗದಿಪಡಿಸಲು ಅವಕಾಶವಿರುತ್ತದೆ ಎಂದು ಹೇಳಿದರು.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 04.11.2023 ರಂದು ಜರುಗಿದ ಕೇಂದ್ರಿಯ ಖರೀದಿ ಸಮಿತಿಯ ಶಿಫಾರಸ್ಸುಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 7

ವಿಷಯ: ದಿನಾಂಕ. 03.11.2023 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ನಡವಳಿಗಳ ಅನುಮೋದನೆ ಕುರಿತು.

***<u>ಪರಾಮಾರ್ಶಕ ಟಿಪ್ಪಣಿ:</u>***

ವಿಶ್ವವಿದ್ಯಾಲಯದ ಕ್ರೀಡಾ ಸಲಹಾ ಸಮಿತಿಯ ಸಭೆಯನ್ನು ದಿನಾಂಕ 03.11.2023 ರಂದು ಜರುಗಿರುತ್ತದೆ. ಸದರಿ ಸಭೆಯಲ್ಲಿ ವಿಶ್ವವಿದ್ಯಾಲಯದ 2023-24ನೇ ಸಾಲಿನ ಕ್ರೀಡಾ ಚಟುವಟಿಕೆಗಳ ಕುರಿತು ವಿವರವಾಗಿ ಚರ್ಚಿಸಿ ನಡವಳಿಗಳನ್ನು ಸಿದ್ಧಪಡಿಸಲಾಗಿದೆ.

ಕ್ರೀಡಾ ಸಲಹಾ ಸಮಿತಿಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***<u>ಸಿಂಡಿಕೇಟ್ ತೀರ್ಮಾನ:</u>***

**ದಿನಾಂಕ 03.11.2023 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ಶಿಫಾರಸ್ಸುಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 8

ವಿಷಯ : ವಿಶ್ವವಿದ್ಯಾನಿಲಯದ ಪಠ್ಯಕ್ರಮಗಳ ಪ್ರಕಾರ ಭಾಷಾ ವಿಷಯಗಳ ಪಠ್ಯ ಪುಸ್ತಕಗಳನ್ನು ಸಿದ್ದಪಡಿಸಲು ಲೇಖಕರಿಗೆ / ಸಂಪಾದಕರಿಗೆ ಸಂಭಾವನೆ ನಿಗದಿಪಡಿಸುವ ಕುರಿತು.

***<u>ಪರಾಮರ್ಶಕ ಟಿಪ್ಪಣಿ:</u>***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡಬೇಕಾದ ಭಾಷಾ ವಿಷಯಗಳ ಪಠ್ಯ ಪುಸ್ತಕಗಳನ್ನು ಆಯಾ ಅಧ್ಯಯನ ಮಂಡಳಿಯ ಸದಸ್ಯರು ಹಾಗೂ ಹಿರಿಯ ಪ್ರಾಧ್ಯಾಪಕರನ್ನು ಒಳಗೊಂಡ ಸಂಪಾದಕೀಯ ಮಂಡಳಿ ಸಿದ್ದಪಡಿಸುತ್ತದೆ. ಸದರಿ ಸಂಪಾದಕೀಯ ಮಂಡಳಿಯ ಅಧ್ಯಕ್ಷರು, ಲೇಖಕರು, ಸಂಪಾದಕರು, ಅನುವಾದಕರು, ಪರಿಶೀಲಕರು, ಉಪನ್ಯಾಸ ಮಾಲೆಗಳಲ್ಲಿ ಉಪನ್ಯಾಸ ನೀಡುವ ಗಣ್ಯರಿಗೆ ಸಂಭಾವನೆಯನ್ನು ನೀಡಲು ಅವಕಾಶ ಕಲ್ಪಿಸಬೇಕಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂ:ಪ್ರ.ಪ್ರ.ಗೌ.ಸಂ/2023-24 ದಿನಾಂಕ. 17.04.2023 ಪ್ರಕಾರ ಕೆಳಕಂಡ ದರಗಳನ್ನು ನಿಗದಿಪಡಿಸಿರುತ್ತಾರೆ. ಸದರಿ ದರಗಳನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ.

| ಕ್ರ.ಸಂ | ವಿವರಗಳು | ದಿನಾಂಕ. 20.03.2023 ರವರೆಗೆ ಅನ್ವಯವಾಗುವ ದರಗಳು | ದಿನಾಂಕ. 21.03.2023 ರಿಂದ ಅನ್ವಯವಾಗುವ ದರಗಳು |
|---|---|---|---|
| | <u>ಪಠ್ಯಪುಸ್ತಕಗಳಿಗೆ</u> | | |
| 1. | ಪುಸ್ತಕಗಳ ಲೇಖಕರಿಗೆ ರಾಯಧನ (Royalty) | ಪುಸ್ತಕದ ಮುಖ ಬೆಲೆಯ ಶೇಕಡಾ 15 ರಷ್ಟು | ಪುಸ್ತಕದ ಮುಖ ಬೆಲೆಯ ಶೇಕಡಾ 15 ರಷ್ಟು |

| | | | |
|---|---|---|---|
| | ವಿವಿಧ ಲೇಖನಗಳನ್ನು ಆಯ್ದು ಸಂಕಲಿಸಿರುವ ಕೃತಿಯ ಸಂಪಾದಕರಿಗೆ<br>ಅ. ಲೇಖನಕ್ಕೆ<br>ಆ. ಪ್ರತಿ ಕವಿತೆಗೆ | ರೂ. 3000.00<br>ರೂ. 300.00<br>ರೂ. 200.00 | ರೂ. 8000.00<br>ರೂ. 1000.00<br>ರೂ. 500.00 |
| 3. | ಅನುವಾದಕರಿಗೆ<br>ಅ)ಮೂಲ ಕೃತಿಯಲ್ಲಿನ 1000 ಪದಗಳ ಅನುವಾದಕ್ಕೆ<br>ಆ)ಭಾಷಾ ಪರಿಶೀಲಕರಿಗೆ ಪ್ರತಿ ಪುಟಕ್ಕೆ | ರೂ. 100.00<br>ರೂ. 5.00 | ರೂ. 100.00<br>ರೂ. 6.00 |
| | ಇತರ ಪುಸ್ತಕಗಳಿಗೆ | | |
| 4. | ಲೇಖಕರಿಗೆ ಮುಖಬೆಲೆಯ ಮೇಲೆ | ರೂ. 15% | ರೂ. 15% |
| 5. | ಸಂಪಾದಿತ ಕೃತಿಗಳ ಸಂಪಾದಕರಿಗೆ | ರೂ. 500.00 | ರೂ. 1000.00 |
| | ಕರಡು ತಿದ್ದುಪಡಿ<br>a) ಫುಲ್ ಸ್ಕೇಪ್–1/8 – ಪ್ರತಿ ಪುಟಕ್ಕೆ<br>b) ಕ್ರೌನ್ –1/8 – ಪ್ರತಿ ಪುಟಕ್ಕೆ<br>c) ಡೆಮಿ –1/8 – ಪ್ರತಿ ಪುಟಕ್ಕೆ<br>d) ಕ್ರೌನ್ –1/4 – ಪ್ರತಿ ಪುಟಕ್ಕೆ<br>e) ಡಮಿ –1/4 – ಪ್ರತಿ ಪುಟಕ್ಕೆ | ರೂ.2.00<br>ರೂ.3.00<br>ರೂ.4.00<br>ರೂ.5.00<br>ರೂ.5.00 | ರೂ.3.00<br>ರೂ.4.00<br>ರೂ.5.00<br>ರೂ.6.00<br>ರೂ.7.00 |
| 6. | ಪ್ರಚಾರೋಪನ್ಯಾಸ ಮಾಲೆ<br>a) ಪ್ರತಿ ಉಪನ್ಯಾಸಕ್ಕೆ –<br>b) ಪ್ರತಿ ವಿಶೇಷ ಉಪನ್ಯಾಸಕ್ಕೆ –<br>c) ದತ್ತಿ ಉಪನ್ಯಾಸಕ್ಕೆ : | ರೂ. 250.00<br>ರೂ. 250.00<br>ದತ್ತಿ ನಿಯಮದಂತೆ | ರೂ. 1000.00<br>ರೂ. 2000.00 |

ಮೇಲಿನ ದರಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ 21.03.2023 ರಲ್ಲಿ ಪರಿಷ್ಕರಿಸಿದ ದರಗಳಾಗಿದ್ದು, ಸದರಿ ದಿನಾಂಕದಿಂದ ಪರಿಷ್ಕೃತ ದರಗಳನ್ನು ಹಾಗೂ ಹಿಂದಿನ ವರ್ಷಗಳಿಗೆ ಪರಿಷ್ಕರಣ ಪೂರ್ವದ ದರಗಳನ್ನು ನಿಗದಿಪಡಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ವಿಶ್ವವಿದ್ಯಾನಿಲಯದ ವಿವಿಧ ಭಾಷಾ ವಿಷಯಗಳ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಲೇಖಕರು ಮತ್ತು ಸಂಪಾದಕರಿಗೆ ಪ್ರಸ್ತಾವನೆಯಲ್ಲಿ ಸೂಚಿಸಿದಂತೆ ಸಂಭಾವನೆ ದರಗಳಿಗೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 9

ವಿಷಯ: ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರು ಮತ್ತು ಗ್ರಂಥಾಲಯಕ್ಕೆ ಪ್ರಭಾರ ಗ್ರಂಥಪಾಲಕರ ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1) ರ ಅಧಿಸೂಚನೆ ಪ್ರಕಾರಡಾ: ವಿ. ಆರ್. ದೇವರಾಜ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಜೀವರಸಾಯನಶಾಸ್ತ್ರ ವಿಭಾಗ ಅವರನ್ನು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗಕ್ಕೆ ಪ್ರಭಾರ ನಿರ್ದೇಶಕರಾಗಿ ಹಾಗೂ ಉಲ್ಲೇಖ (2) ರ ಅಧಿಸೂಚನೆ ಪ್ರಕಾರಡಾ: ಪಿ. ಆರ್. ಚೇತನ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗಅವರನ್ನು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಪ್ರಭಾರ ಗ್ರಂಥಪಾಲಕರಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ 23 ಮತ್ತು 26 ರಡಿಯಲ್ಲಿ ದಿನಾಂಕ: 27.09.2023 ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಕ ಮಾಡಿ ಅಧಿಸೂಚಿಸಲಾಗಿರುತ್ತದೆ.

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಡಾ. ವಿ.ಆರ್ ದೇವರಾಜ್ ರವರನ್ನು ಪ್ರಭಾರ ದೈಹಿಕ ಶಿಕ್ಷಣ ನಿರ್ದೇಶಕರಾಗಿ ಮತ್ತು ಡಾ. ಪಿ.ಆರ್ ಚೇತನಾ ರವರನ್ನು ಪ್ರಭಾರ ಗ್ರಂಥಪಾಲಕರಾಗಿ ನೇಮಕಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 10

ವಿಷಯ: ಡಾ. ರಿತಿಕಾ ಸಿನ್ಹ, ಸಹ ಪ್ರಾಧ್ಯಾಪಕರು, ಕೆನರಾ ಬ್ಯಾಂಕ್ ಸ್ಕೂಲ್ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅವರು developing a "Net Zero Carbon Hub" a British Council funded project by Birmingham City University, UK ನಲ್ಲಿ ಭಾಗವಹಿಸಲು ಅನುಮತಿಸುವ ಬಗ್ಗೆ.

ಉಲ್ಲೇಖ:
1. ಡಾ. ರಿತಿಕಾ ಸಿನ್ಹ, ಸಹ ಪ್ರಾಧ್ಯಾಪಕರುಅವರ ಮನವಿ ದಿನಾಂಕ: 10.10.2023
2. ವಿಶ್ವವಿದ್ಯಾನಿಲಯದಆದೇಶ ಸಂಖ್ಯೆ: BCU/EST/OOD/2023-24 ದಿನಾಂಕ: 16.10.2023.

****

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1)ರ ಪತ್ರದಲ್ಲಿ ದಿನಾಂಕ: 25.10.2023 ರಿಂದ 04.11.2023 ರವರೆಗೆ (excluding journey days) developing a "Net Zero Carbon Hub" a British Council funded project by Birmingham City University, UK ನಲ್ಲಿ ಭಾಗವಹಿಸಲು ಡಾ. ರಿತಿಕಾ ಸಿನ್ಹ, ಸಹ ಪ್ರಾಧ್ಯಾಪಕರು ಕೆನರಾ

ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅವರು OOD ಮೇಲೆ ತೆರಳಲು ಅನುಮತಿ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ.

ಯುಜಿಸಿ ನಿಯಮಾವಳಿ 2018, 8.1 i(a) ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ 30 ದಿನಗಳಿಗೆ **duty leave** ಮಂಜೂರು ಮಾಡಲು ಅವಕಾಶವಿರುತ್ತದೆ. ದಿನಾಂಕ: 25.10.2023ರಿಂದ 04.11.2023ರವರೆಗೆ (excluding journey days) developing a "Net Zero Carbon Hub" a British Council funded project by Birmingham City University, UK ಗೆ ತೆರಳಲು ತಗಲುವ ಪ್ರಯಾಣ ಭತ್ಯೆ, ವಸತಿ, ಸ್ಥಳೀಯ ವೆಚ್ಚಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನರವರು ಈ ಪ್ರೊಜೆಕ್ಟಗಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿರುವ ಮೊತ್ತರೂ. 10.00 ಲಕ್ಷಗಳಿಂದ ಭರಿಸಲಾಗಿರುತ್ತದೆ.

ಡಾ. ರಿತಿಕಾ ಸಿನ್ಹ, ಸಹ ಪ್ರಾಧ್ಯಾಪಕರಿಗೆ ದಿನಾಂಕ: 25.10.2023 ರಿಂದ 04.11.2023 ರವರೆಗೆ ಭಾಗವಹಿಸಲು ಪ್ರಯಾಣದ ದಿನಗಳನ್ನು ಸೇರಿ OOD ಮೇಲೆ ತೆರಳಲು ಉಲ್ಲೇಖ (2)ರಲ್ಲಿ ಅನುಮತಿ ನೀಡಲಾಗಿದೆ. (ಅನುಬಂಧ-'ಅ') ಇದಕ್ಕೆತ ಗಲುವ ಪ್ರಯಾಣ ಭತ್ಯೆ, ವಸತಿ, ಸ್ಥಳೀಯ ವೆಚ್ಚಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನರವರು ಈ ಪ್ರೊಜೆಕ್ಟಗಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿರುವ ಮೊತ್ತ ರೂ.10.00 ಲಕ್ಷಗಳಿಂದ ಭರಿಸಲಾಗಿರುತ್ತದೆ.

ಸದರಿ ವಿಷಯವನ್ನು ಸಿಂಡಿಕೇಟ್‌ನ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಡಾ. ರಿತಿಕಾ ಸಿನ್ಹಾ ರವರಿಗೆ ದಿನಾಂಕ 25.10.2023 ರಿಂದ 04.11.2023ರ ವರೆಗೆ** (excluding journey days) developing a "Net Zero Carbon Hub" a British Council funded project by Birmingham City University, UK **ನಲ್ಲಿ ಭಾಗವಹಿಸಲು ಮತ್ತು ಈ ಕುರಿತು ಸದರಿ** Project **ಗಾಗಿ ಮೀಸಲಿರಿಸಿದ ಮೊತ್ತದಿಂದ ಪ್ರಯಾಣ ಭತ್ಯೆ ಹಾಗೂ ಸ್ಥಳೀಯ ವೆಚ್ಚಗಳನ್ನು ಭರಿಸಲು ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 11

ವಿಷಯ: ಡಾ. ಎಂ. ಪಾಂಡುರಂಗಪ್ಪ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಇವರಿಗೆ ಕೋವಿಡ್-19 ಚಿಕಿತ್ಸೆಗಾಗಿ ರೂ. 3,25,000/- ಅರ್ಹತಾ ಮೊತ್ತವನ್ನು ಪಾವತಿಸುವ ಕುರಿತು

ಉಲ್ಲೇಖ: 1. ಅಕುಕ/ಎಸ್.ಎ.ಎಸ್.ಟಿ/ಎಂ.ಆರ್.ಸಿ/27804/2023-24 ದಿನಾಂಕ.30.05.2023
2. ಕಂಡಿಕೆ 51ರಲ್ಲಿ

****

***ಪರಾಮರ್ಶಕ ಟಿಪ್ಪಣಿ:***

ವಿಷಯ ಹಾಗೂ ಉಲ್ಲೇಖ 1 ಮತ್ತು 2 ರಲ್ಲಿಯ ವಿವರದಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ರಸಾಯನಶಾಸ್ತ್ರ ವಿಭಾಗದಲ್ಲಿ ಡಾ. ಪಾಂಡುರಂಗಪ್ಪ ಎಂ. ರವರಿಗೆ ನ್ಯೂಮೋನಿಯಾ/ ಕೋವಿಡ್-19 ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಯಾದ ಗುರುಶ್ರೀ ಹೈಟೆಕ್ ಮಲ್ಟಿ ಸ್ಪೆಷಾಲಿಟಿಯಲ್ಲಿ ಚಿಕಿತ್ಸೆ ಪಡೆದಿರುವ

ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಕ್ಲೈಮು ಮಾಡಲು ರೂ.50,000/- ಗಳಿಗೆ ಅರ್ಹತಾ ಮೊತ್ತವೆಂದು ಕರ್ನಾಟಕ ಸರ್ಕಾರದ ಸುವರ್ಣ ಆರೋಗ್ಯ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರು ದಿನಾಂಕ. 30.05.2023 ರಂದು ಪತ್ರದ ಮುಖೇನ ತಿಳಿಸಿರುತ್ತಾರೆ.

ಅದರಂತೆ, ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಯವರು Aster CMI Hospital ನಲ್ಲಿ ದಿನಾಂಕ. 18.04.2021 ರಿಂದ 13.05.2021 ರವರೆಗೆ 26 ದಿನಗಳು ಕೋವಿಡ್-19ನ ಚಿಕಿತ್ಸೆಗಾಗಿ ರೂ.2,75,000/- ಗಳಿಗೆ ಅರ್ಹತಾ ಮೊತ್ತದ ಕಡತದ ಕಂಡಿಕೆ 51 ರಲ್ಲಿ ತಿಳಿಸಿರುತ್ತಾರೆ.

ಸದರಿ ಪ್ರಾಧ್ಯಾಪಕರಿಗೆ ಕೋವಿಡ್-19ರ ಚಿಕಿತ್ಸೆಗಾಗಿ ಗುರುಶ್ರೀ ಹೈಟೆಕ್ ಮಲ್ಟಿ ಸ್ಪೆಷಾಲಿಟಿ ಮತ್ತು Aster CMI Hospital ನಲ್ಲಿ ಚಿಕಿತ್ಸೆಗಾಗಿ ವೈದ್ಯಕೀಯ ಮೊತ್ತ ಮರುಪಾವತಿಸಲು ರೂ. 3,25,000/- ಅರ್ಹತಾ ಮೊತ್ತವಾಗಿರುತ್ತದೆ. ಈ ಮೊತ್ತವನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಕಡತವನ್ನು ಮಂಡಿಸಿದೆ.

*<u>ಸಿಂಡಿಕೇಟ್ ತೀರ್ಮಾನ:</u>*

**ಡಾ. ಎಂ ಪಾಂಡುರಂಗಪ್ಪ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಇವರಿಗೆ ಕೋವಿಡ್ -19 ಚಿಕಿತ್ಸೆಗಾಗಿ ಭರಿಸಿದ ರೂ. 3,25,000/- (ಮೂರು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 12

ವಿಷಯ: ಬೆಂಗಳೂರು ವಿಶ್ವವಿದ್ಯಾನಿಲಯ(ಜ್ಞಾನಭಾರತಿ)ಯನ್ನು ತ್ರಿಭಜಿಸಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದು, ಸದರಿ ವಿಶ್ವವಿದ್ಯಾನಿಲಯಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ವರ್ಗಾವಣೆಗೊಂಡಿರುವ ಸ್ಥಿರ ಆಸ್ತಿ, ಜಮೀನನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರು(ಆ) ರವರ ಹೆಸರಿಗೆ ಕಂದಾಯ ದಾಖಲೆಗಳಲ್ಲಿ ವರ್ಗಾಹಿಸಿ, ಖಾತಾ ವರ್ಗಾವಣೆ ಮಾಡಿಕೊಡುವ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಶೀಲಿಸಿ ಬಾಕಿ ಇರುವ ಆಸ್ತಿ ತೆರಿಗೆಯನ್ನು ಪಾವತಿಸಲು ನೀಡಿರುವ ಬೇಡಿಕೆ ಪತ್ರದ ಪ್ರಕಾರ ಆಸ್ತಿ ತೆರಿಗೆ ಪಾವತಿಸುವ ಕುರಿತು.

ಉಲ್ಲೇಖ:
1. Parliamentary Affairs Notification Dated:13.08.2015
2. ಸರ್ಕಾರಿ ಆದೇಶ ಸಂಖ್ಯೆ:ED 167, UBV 2017 ದಿನಾಂಕ:29.06.2017
3. ದಿನಾಂಕ 31.05.2018 ರಂದು ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಕುಲಸಚಿವರುಗಳ ಸಮ್ಮುಖದಲ್ಲಿ ನಡೆದ ಸಭೆಯ ನಡವಳಿಗಳು
4. ಬೆಂ.ನ.ವಿ/ಬಿ.ಆ.ಖಾ.ಬ/ಬಿ.ಬಿ.ಎಂ.ಪಿ/2023-24/06/ ದಿನಾಂಕ:23.03.2023
5. ಸಂಖ್ಯೆ: ಡಿಎ(ವನ)ವಾ-110/ಪಿ.ಆರ್/2022-23 ಪಿಐಡಿ:77-112-05

*<u>ಪರಾಮರ್ಶಕ ಟಿಪ್ಪಣಿ:</u>*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಡಳಿತದಲ್ಲಿ ದಕ್ಷತೆ ಮತ್ತು ಶಿಕ್ಷಣದಲ್ಲಿ ಉತ್ತಮ

ಗುಣಮಟ್ಟವನ್ನು ತರುವ ದೃಷ್ಟಿಯಿಂದ, ಸರ್ಕಾರವು ಉಲ್ಲೇಖ 1ರ ಸರ್ಕಾರಿ ಆದೇಶದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ತ್ರಿಭಜಿಸಿ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು, ತಜ್ಞರ ಸಮಿತಿಯನ್ನು ರಚಿಸಿ ಅವರಿಂದ ವರದಿಯನ್ನು ಪಡೆದು ಹೊಸದಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ. ಸದರಿ ವಿಶ್ವವಿದ್ಯಾನಿಲಯವು 2017-18 ನೇ ಸಾಲಿನಲ್ಲಿ ಪ್ರಾರಂಭವಾಗಿ ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಉಲ್ಲೇಖ 3 ರ ಪ್ರಕಾರ ದಿನಾಂಕ:31.05.2018 ರಂದು ನಡೆದ ಸಭೆಯಲ್ಲಿ ಸೆಂಟ್ರಲ್ ಕಾಲೇಜಿನಲ್ಲಿರುವ ಕಟ್ಟಡಗಳನ್ನು ಹಾಗೂ ಪ್ರಸನ್ನ ಕುಮಾರ್ ಬ್ಲಾಕ್‌ನಲ್ಲಿರುವ ಕಟ್ಟಡಗಳನ್ನು ಮತ್ತು ನಿವೇಶನಗಳನ್ನು ಯಥವತ್ತಾಗಿ ದಿನಾಂಕ:16.06.2018 ಹಾಗೂ 1.08.2018 ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವಂತೆ ತೀರ್ಮಾನಿಸಲಾಯಿತು.

ಹೊಸದಾಗಿ ಸ್ಥಾಪನೆಯಾಗಿರುವ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ UGC ಮಾನ್ಯತೆಯನ್ನು ಪಡೆಯಲು ಹಾಗೂ NAAC ಶ್ರೇಣಿಯನ್ನು ಪಡೆಯಲು ವಿಶ್ವವಿದ್ಯಾಲಯವು ಸ್ವಂತ ಜಮೀನು, ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕೆಂಬ ನಿಯಮವಿರುತ್ತದೆ. ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಹೊಸದಾಗಿ ಸ್ಥಾಪನೆಯಾಗಿರುವ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜಮೀನು ಮತ್ತು ಕಟ್ಟಡಗಳು ಹಾಗೂ ಪ್ರಸನ್ನ ಕುಮಾರ್ ಬ್ಲಾಕ್‌ನಲ್ಲಿರುವ ಜಮೀನು, ಕಟ್ಟಡ, ಪೆವಿಲಿಯನ್(ಕ್ರೀಡಾಂಗಣ), ಕಾನೂನು ಕಾಲೇಜು ಹಾಗೂ ಮಹಿಳಾ ವಿದ್ಯಾರ್ಥಿ ನಿಲಯಗಳನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ತುರ್ತಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಹೆಸರಿಗೆ ವರ್ಗಾಯಿಸಿಕೊಳ್ಳುವ ಅಗತ್ಯವಿರುತ್ತದೆ.

ಸೆಂಟ್ರಲ್ ಕಾಲೇಜಿಗೆ ಹೊಂದಿಕೊಂಡಿರುವ ಪಿ.ಕೆ ಬ್ಲಾಕ್, ಕ್ರೀಡಾಂಗಣ, ಕಾನೂನು ಕಾಲೇಜ್, ಹಾಸ್ಟೆಲ್, ಇತರೆ ಕಟ್ಟಡಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾಹಿಸಿರುವ ಪ್ರಯುಕ್ತ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ 110/77, ಸಂಪಗಿ ರಾಮನಗರ, ಸ್ವತ್ತಿನ ಸಂಖ್ಯೆ:5 ಶೇಷಾದ್ರಿ ರಸ್ತೆಯಲ್ಲಿರುವ ಸೆಂಟ್ರಲ್ ಕಾಲೇಜಿನ ಆಸ್ತಿಯ ಅನುಭವದಾರರು ಸರ್ಕಾರ ಎಂದು ನಮೂದಿಸಲಾಗಿದ್ದು, (Director Central College)ಇದರ ಒಟ್ಟು ವಿಸ್ತೀರ್ಣ 64 ಎಕರೆಗಳಿದ್ದು, ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವ ಜಮೀನು, ಮತ್ತು ಕಟ್ಟಡಗಳನ್ನು ಈಗಾಗಲೇ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಗೊಂಡಿರುವ ಪ್ರಯುಕ್ತ ಸದರಿ ಕಟ್ಟಡಗಳ ಮತ್ತು ಜಮೀನಿನ ಮಾಲಿಕತ್ವವನ್ನು ಕುಲಸಚಿವರು(ಆ) ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರವರ ಹೆಸರಿಗೆ ತುರ್ತಾಗಿ ಕಂದಾಯ ದಾಖಲೆಗಳಲ್ಲಿ ವರ್ಗಾಯಿಸಿ, ಖಾತಾ ಬದಲಾವಣೆ ಮಾಡಿಕೊಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪರಿಶೀಲಿಸಿ 2008-09 ರಿಂದ 2022-23ರ ವರೆವಿಗೆ ಲೆಕ್ಕ ಹಾಕಿ ಒಟ್ಟು ಆಸ್ತಿ ತೆರಿಗೆ ರೂ.82,29,992/-ಗಳು ಇದರ ಜೊತೆಗೆ ಶೇ.2 ರಷ್ಟು ಬಡ್ಡಿ(ಮಾಸಿಕ) ರೂ. 1,46,64,990 ಒಟ್ಟು ಸೇರಿ ರೂ.2,28,94,928/-ಗಳನ್ನು ಪಾವತಿಸಬೇಕೆಂದು ಉಲ್ಲೇಖ 5 ರಲ್ಲಿ ಬೇಡಿಕೆ ಪತ್ರವನ್ನು ನೀಡಿರುತ್ತಾರೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು 2017-18 ರಿಂದ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿಂದ ಇಲ್ಲಿಯವರೆವಿಗೂ ಲೆಕ್ಕಹಾಕಿ ಪರಿಷ್ಕೃತ ಬೇಡಿಕೆ ಪತ್ರವನ್ನು ನೀಡಬೇಕೆಂದು ಕೋರಿ ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆ ಅವರಿಗೆ ಪತ್ರ ವ್ಯವಹರಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅವರು ನೀಡಿರುವ ಆಸ್ತಿ ತೆರಿಗೆಯ ಮೊತ್ತ 2017–18 ರಿಂದ 2022–23 ರ ವರೆವಿಗೂ ರೂ.36,90,490/– ಇದಕ್ಕೆ ಶೇ.2 ರಷ್ಟು ಬಡ್ಡಿ(ಮಾಸಿಕ)ಮೊತ್ತ ರೂ.27,98,490/– ಒಟ್ಟಾರೆ ರೂ.64,88,980/–ಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ಪಾವತಿಸಬೇಕಾಗಿದೆ. ಪಾವತಿಸಿದ ನಂತರ ಈ ಆಸ್ತಿಗಳ ಮಾಲಿಕತ್ವವನ್ನು ಕುಲಸಚಿವರು(ಆ) ರವರ ಹೆಸರಿಗೆ ಬದಲಾವಣೆ ಮಾಡಿಕೊಡುತ್ತಾರೆ. ಈ ಸಂಬಂಧ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ರೂ.64,88,980/–ಗಳನ್ನು ಪಾವತಿಸುವ ಬಗ್ಗೆ ದಿನಾಂಕ 9.11.2023 ರಂದು ಜರುಗಿದ ಹಣಕಾಸು ಸಮಿತಿ ಸಭೆ ಪರಿಶೀಲಿಸಿ ಕೆಳಗಿನಂತೆ ತೀರ್ಮಾನಿಸಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ (ಮೊದಲಿನ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ) ಸ್ಥಾಪನೆಯಾದ ದಿನಾಂಕದಿಂದ ಅನ್ವಯವಾಗುವ ಆಸ್ತಿ ತೆರಿಗೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪಾವತಿಸುವ ಜವಾಬ್ದಾರಿ ಹೊಂದಿರುತ್ತದೆ ಎಂಬುದಾಗಿ ಹಣಕಾಸು ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2017-18 ರಿಂದ 2022-23ರ ಅವಧಿಯ ಆಸ್ತಿ ತೆರಿಗೆ ರೂ. 36,90,490.00 ಮತ್ತು ಈ ಅವಧಿಗೆ ಅನ್ವಯಿಸುವ ಬಡ್ಡಿ ಹಣ ರೂ. 27,98,490.00 ಗಳನ್ನು ಒಟ್ಟಾರೆ ರೂ. 64,88,980.00 ಪಾವತಿಸಲು ಅನುಮೋದನೆ ನೀಡಲು ಶಿಫಾರಸ್ಸು ಮಾಡಲಾಯಿತು. ಬಡ್ಡಿ ಹಣ ಪಾವತಿಸುವ ಕುರಿತು ವಿಶ್ವವಿದ್ಯಾನಿಲಯವು ಸರ್ಕಾರದ ಅಂಗ ಸಂಸ್ಥೆಯಾಗಿರುವುದರಿಂದ ಸೂಕ್ತ ವಿನಾಯಿತಿ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕೋರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿತು.

ಹಣಕಾಸು ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಹಣಕಾಸು ಸಮಿತಿಯ ಅನುಮೋದನೆಯನ್ನು ಪರಿಗಣಿಸಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ದಿನಾಂಕದಿಂದ ಅನ್ವಯವಾಗುವ ಆಸ್ತಿ ತೆರಿಗೆಯ ಮೊತ್ತ ರೂ. 64,88,980/– (ಅರವತ್ತ ನಾಲ್ಕು ಲಕ್ಷ ಎಂಭತ್ತೆಂಟು ಸಾವಿರ ಒಂಭತ್ತು ನೂರ ಎಂಭತ್ತು ರೂಪಾಯಿಗಳು ಮಾತ್ರ) ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪಾವತಿಸಲು ಅನುಮೋದನೆ ನೀಡಲಾಯಿತು.**

**ಹಣಕಾಸು ಸಮಿತಿ ಶಿಫಾರಸ್ಸು ಮಾಡಿದಂತೆ ವಿಧಿಸಲಾದ ಬಡ್ಡಿ ಹಣವನ್ನು ಒಂದು ಸಲದ ಕ್ರಮವಾಗಿ ಮನ್ನ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿನಂತಿಸಬೇಕೆಂದು ಸಿಂಡಿಕೇಟ್ ಸಭೆ ಸೂಚಿಸಿತು. ಹಾಗೆಯೇ ವಿಶ್ವವಿದ್ಯಾನಿಲಯ ಸರ್ಕಾರದ ಅಂಗ ಸಂಸ್ಥೆಯಾಗಿರುವುದರಿಂದ ಸದರಿ ಆಸ್ತಿ ಪ್ರಸ್ತುತ ಸರ್ಕಾರದ ಹೆಸರಿನಲ್ಲಿರುವುದರಿಂದ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆಯುವ ಕುರಿತು ಪರಿಶೀಲಿಸಬೇಕೆಂದು ಸದಸ್ಯರು ಅಭಿಪ್ರಾಯ ಪಟ್ಟರು.**

ವಿಷಯಸಂಖ್ಯೆ: 13

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24 ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿಷಯವಾರು ಪರೀಕ್ಷಾ ಮಂಡಳಿಗಳನ್ನು ಅನುಮೋದಿಸುವ ಕುರಿತು.

*<u>ಪರಾಮರ್ಶಕ ಟಿಪ್ಪಣಿ:</u>*

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಸೆಕ್ಷನ್ 36 (1)(2)(3) ರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಎಚ್.ಡಿ. ವಿಷಯಗಳಿಗೆ ಸಂಬಂಧಿಸಿದಂತೆ ದಿನಾಂಕ 08.11.2023 ಮತ್ತು 09.11.2023 ರಂದು ನಡೆದ BoAE ಸಭೆಗಳಲ್ಲಿ ಪರೀಕ್ಷಾ ಮಂಡಳಿಗಳನ್ನು ರಚಿಸಲಾಗಿದೆ, BoAE ರಚಿಸಿದ ಪರೀಕ್ಷಾ ಮಂಡಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬೇಕಾಗುತ್ತದೆ. 2023-24ನೇ ಸಾಲಿನ ಪರೀಕ್ಷೆಗಳು ನಡೆಯುವ ದಿನಾಂಕಗಳು ಸಮೀಪಿಸಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಮಂಡಳಿಗಳನ್ನು ತುರ್ತಾಗಿ ರಚಿಸಿ, ಸಂಬಂಧಪಟ್ಟ ಅಧ್ಯಕ್ಷರು ಮತ್ತು ಸದಸ್ಯರಿಗೆ ಆದೇಶಗಳನ್ನು ಹೊರಡಿಸಬೇಕಾಗಿದೆ. ನಿಯಮದ ಪ್ರಕಾರ ಪರೀಕ್ಷಾ ಮಂಡಳಿಗಳ ಅವಧಿ ಒಂದು ವರ್ಷವಾಗಿದ್ದು, ಈ ಅವಧಿಯಲ್ಲಿ ಮಂಡಳಿಯ ಅಧ್ಯಕ್ಷರುಗಳು ಅಥವಾ ಸದಸ್ಯರು ಸೇವೆಯಿಂದ ನಿವೃತ್ತರಾದಲ್ಲಿ ಅಥವಾ ಇನ್ನಾವುದೇ ಕಾರಣದಿಂದ ಸೇವೆಯಲ್ಲಿ ಮುಂದುವರೆಯದಿದ್ದಲ್ಲಿ, ಅವರ ಸದಸ್ಯತ್ವ ರದ್ದಾಗುತ್ತದೆ. ಕಾರಣ BoAE ಸಿದ್ಧಪಡಿಸಿರುವ ಹೊಸ ಪರೀಕ್ಷಾ ಮಂಡಳಿಗಳ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಪರೀಕ್ಷಾ ಮಂಡಳಿಯಲ್ಲಿ ಏನಾದರೂ ಬದಲಾವಣೆ ಮಾಡಬೇಕಾದ ಸನ್ನಿವೇಶ ಬಂದಲ್ಲಿ, ಮಾನ್ಯ ಕುಲಪತಿಯವರಿಗೆ ಅಗತ್ಯ ಬದಲಾವಣೆ ಮಾಡಲು ಅಧಿಕಾರ ನೀಡಲು ಸಹ ಸಿಂಡಿಕೇಟ್ ಪರಿಗಣನೆ ಮತ್ತು ಅನುಮೋದನೆಗೆ ಪ್ರಸ್ತಾಪಿಸಲಾಗಿದೆ.

*<u>ಸಿಂಡಿಕೇಟ್ ತೀರ್ಮಾನ:</u>*

**2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿಷಯವಾರು ಪರೀಕ್ಷಾ ಮಂಡಳಿಗಳಿಗೆ ಹಾಗೂ ಪರೀಕ್ಷಕರ ಪಟ್ಟಿಗಳಿಗೆ ಅನುಮೋದನೆ ನೀಡಲಾಯಿತು. ಪರೀಕ್ಷಾ ಮಂಡಳಿಯಲ್ಲಿ ಬದಲಾವಣೆ ಮಾಡಬೇಕಾದ ಅಗತ್ಯ ಕಂಡು ಬಂದಲ್ಲಿ ಸೂಕ್ತ ಬದಲಾವಣೆ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

ವಿಷಯ ಸಂಖ್ಯೆ: 14

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಾದ Nitte School of Fashion Technology and Interior Design ಮತ್ತು Dr. N.S.A.M First Grade College ಕಾಲೇಜುಗಳು NITTE (Deemed to be University) ಗೆ ಸೇರಲು ನಿರಾಕ್ಷೇಪಣಾ ಪತ್ರ ನೀಡಲು ಸಲ್ಲಿಸಿದ ಮನವಿಯ ಪರಿಶೀಲನೆ ಕುರಿತು:-

ಉಲ್ಲೇಖ:

1. ಸಂಖ್ಯೆ: Ref: NSFTID/BCU/2023-24/679 Dated: 26.10.2023, ಪ್ರಾಂಶುಪಾಲರು, Nitte School of Fashion Technology and Interior Design, PB No. 6429, NMIT Campus, Govindapura, Gollahalli, Bengaluru-89
2. ಸಂಖ್ಯೆ: Ref: Dr.NSAMFGCB/BCU/2023/0063 dated: 27.10.2023 ಪ್ರಾಂಶುಪಾಲರು, Dr. N.S.A.M First Grade College, Gollahalli, Yalahanka Hobli, Bengaluru-560089.

****

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿರುವ ಸಂಯೋಜಿತ ಕಾಲೇಜುಗಳಾದ (1) Nitte School of Fashion Technology and Interior Design ಮತ್ತು (2) Dr. N.S.A.M First Grade College ಇವುಗಳು ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸಿ 2024-25 ರಿಂದ ಹಂತ ಹಂತವಾಗಿ ವಿಶ್ವವಿದ್ಯಾಲಯ ಸಂಯೋಜನೆಯಿಂದ ಹಿಂದಕ್ಕೆ ಸರಿದು, ಮಂಗಳೂರಿನಲ್ಲಿರುವ NITTE (Deemed to be University) ಯ ಸಂಯೋಜನೆ ಹೊಂದಲು ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಆದರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ 2024-25ನೇ ಸಾಲಿನಿಂದ ಹಂತ ಹಂತವಾಗಿ ಸಂಯೋಜನೆ ಹಿಂದಕ್ಕೆ ಪಡೆದು NITTE (Deemed to be University) ಮಾನ್ಯತೆ ಹೊಂದಲು ನಿರಾಕ್ಷೇಪಣಾ ಪತ್ರ ನೀಡಬೇಕೆಂದು ಕೋರಿರುತ್ತಾರೆ.

Deemed to be University Off Campus ಶೈಕ್ಷಣಿಕ ಸಂಸ್ಥೆಗಳನ್ನು ಸಂಯೋಜಿಸಿಕೊಳ್ಳಲು ಅವಕಾಶವಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜನೆ ಅವಧಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ತಮ್ಮ ಪದವಿಗಳನ್ನು ಪೂರ್ಣಗೊಳಿಸುವವರೆಗೆ ಸದರಿ ಮಹಾವಿದ್ಯಾಲಯಗಳು ಈ ವಿಶ್ವವಿದ್ಯಾಲಯದ ಸಂಯೋಜನೆಯನ್ನು ಮುಂದುವರೆಸಬೇಕಾಗುತ್ತದೆ. ಎರಡೂ ಮಹಾವಿದ್ಯಾಲಯಗಳು NITTE (Deemed to be University) ವ್ಯಾಪ್ತಿಗೆ 2024-25ನೇ ಸಾಲಿನಿಂದ ಪ್ರಥಮ ಸೆಮಿಸ್ಟರಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಒಳಪಡಿಸಬೇಕೆಂದು ಮತ್ತು 2023-24ನೇ ಸಾಲಿನ ಪ್ರವೇಶ ಪಡೆದ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳ ಪದವಿ ವ್ಯಾಸಂಗ ಪೂರ್ಣಗೊಳ್ಳುವವರೆಗೆ ಪಾಠ ಪ್ರವಚನ ಹಾಗೂ ಪರೀಕ್ಷೆಗಳನ್ನು

ನಡೆಸಲು ಸಂಯೋಜನೆ ಮುಂದುವರೆಸಿ ಹಂತ ಹಂತವಾಗಿ ಈ ವಿಶ್ವವಿದ್ಯಾಲಯದ ಸಂಯೋಜನೆಯಿಂದ ಬಿಡುಗಡೆ ಹೊಂದಬಹುದಾಗಿದೆ.

ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ Nitte School of Fashion Technology and Interior Design ಮತ್ತು Dr. N.S.A.M First Grade College ಕಾಲೇಜುಗಳಿಗೆ NITTE (Deemed to be University) ಗೆ ಸಂಯೋಜನೆಗೊಳ್ಳಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಾದ NITTE School of Fashion Technology and Interior Design ಮತ್ತು Dr. N.S.A.M First Grade College ಗಳು ಮಂಗಳೂರಿನ NITTE Deemed to be University ಗೆ ಸೇರಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನಿರಾಕ್ಷೇಪಣಾ ಪತ್ರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 15

ವಿಷಯ: ಪಿಹೆಚ್.ಡಿ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ಬೋಧಕರಿಗೆ ಗೌರವಧನ / ನೀಡುವ ಸಂಭಾವನೆ ಪರಿಷ್ಕರಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಸದ್ಯದಲ್ಲಿಯೇ ಪಿಹೆಚ್.ಡಿ. ಕೋರ್ಸುಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲು ಸಿದ್ಧತೆ ಮಾಡಿಕೊಂಡಿದ್ದು, ಇದಕ್ಕಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಬೇಕಾಗಿರುತ್ತದೆ. ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಡಾ. ವಿ. ಆರ್. ದೇವರಾಜ್ ಮುಖ್ಯಸ್ಥರು, ಜೀವ ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇವರನ್ನು ನೇಮಿಸಲಾಗಿದೆ. ಡಾ. ವಿ. ಆರ್. ದೇವರಾಜ್‌ರವರು, ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲು ಬೆಂಗಳೂರು ವಿಶ್ವವಿದ್ಯಾಲಯವು 2014 ರಿಂದಲೇ ರೂ. 3,500/– (ರೂ. ಮೂರು ಸಾವಿರದ ಐನೂರು) ಗಳನ್ನು ನಿಗಧಿಪಡಿಸಲಾಗಿರುತ್ತದೆ ಎಂದು ತಿಳಿಸಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ರೂ 2,000/– (ರೂ. ಎರಡು ಸಾವಿರ) ನಿಗಧಿ ಮಾಡಲಾಗಿದೆ. ಆದುದರಿಂದ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವ ಬೋಧಕರಿಗೆ ರೂ. 3,500/– ಗಳನ್ನು ಗೌರವಧನವಾಗಿ ನೀಡಲು ಕ್ರಮ ತೆಗೆದುಕೊಳಬೇಕೆಂದು ಕೋರಿರುತ್ತಾರೆ.

ಒಂದು ಪ್ರಶ್ನೆ ಪತ್ರಿಕೆ ತಯಾರಿಸಲು ನೂರು ವಿವಿಧ ಪ್ರಶ್ನೆಗಳನ್ನು ಮತ್ತು ಆ ಪ್ರಶ್ನೆಗಳಿಗೆ ನಾಲ್ಕು ಕೀ ಉತ್ತರಗಳನ್ನು ಸಿದ್ಧಪಡಿಸಲು ಹೆಚ್ಚು ಸಮಯ ಮತ್ತು ನುರಿತ ಅನುಭವ ಇರುವ ಅಧ್ಯಾಪಕರ ಅವಶ್ಯಕತೆ ಇದೆ, ಅರ್ಹ ಬೋಧಕ ಸಿಬ್ಬಂದಿಗಳಿಗೆ ಈಗ ನಿಗಧಿಪಡಿಸಿರುವ ಗೌರವ ಧನಕ್ಕೆ ಕೆಲಸ ಮಾಡುವುದು ಸಾಧ್ಯವಿರುವುದಿಲ್ಲ, ಆದುದರಿಂದ ನೂರು ಪ್ರಶ್ನೆಗಳು ಹಾಗೂ ಪ್ರತೀ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ಕೀ ಉತ್ತರಗಳನ್ನು ಸಿದ್ಧಪಡಿಸುವ ಸಿಬ್ಬಂದಿಗೆ ರೂ. 2,000/– ರಿಂದ ರೂ.3,500/– ಗಳಿಗೆ ಪರಿಷ್ಕರಿಸಲು ಮತ್ತು ಕನ್ನಡಕ್ಕೆ ತರ್ಜುಮೆ (Translate) ಮಾಡಲು ಪ್ರತಿ ಪ್ರಶ್ನೆ ಪತ್ರಿಕೆಗೆ ರೂ. 1,500/– ಗೌರವಧನ ನಿಗಧಿಪಡಿಸುವ ಪ್ರಸ್ತಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಪ್ರಸ್ತಾವನೆಯಲ್ಲಿ ಸೂಚಿಸಿದಂತೆ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಯ ಹಾಗೂ ಪ್ರತಿ ಪ್ರಶ್ನೆಗೆ ಮೂರು ಅಥವಾ ನಾಲ್ಕು ಕೀ ಉತ್ತರಗಳನ್ನು ಒಳಗೊಂಡಂತೆ ನೂರು ಪ್ರಶ್ನೆಗಳು ಪ್ರತಿ ಪ್ರಶ್ನೆ ಪತ್ರಿಕೆ ಗೌರವ ಧನವನ್ನು ಪ್ರಸ್ತುತ ರೂ. 2000/– ದಿಂದ ರೂ. 3,500/–ಗಳಿಗೆ ಪರಿಷ್ಕರಿಸಲು ಹಾಗೂ ಕನ್ನಡ ಭಾಷಾಂತರಕ್ಕೆ ಸಿದ್ಧಪಡಿಸಲು ಪ್ರತಿ ಪ್ರಶ್ನೆ ಪತ್ರಿಕೆಗೆ ರೂ. 1,500/–ಗಳ ಗೌರವ ಧನವನ್ನು ನಿಗಧಿಪಡಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

Item No. 16

Sub: Consideration of the recommendations of the Expert Committee with regard to issue of No Objection Certificate to the Mount Carmel College, Bengaluru for declaring the Institute as Deemed to be University under Section-3 of the UGC Act 1956.

***REFERENCE NOTE***:

The Principal and Management of Mount Carmel College (Autonomous) have submitted a proposal seeking No Objection Certificate for submission to the University Grants Commission to declare the institution as Deemed-to-be University in terms of Section-3 of UGC Act read with University Grants Commission (Institutions Deemed-to-be Universities) Regulations-2023. An Expert Committee under Chairmanship of Vice-Chancellor was constituted to verify the eligibility of the College to issue No Objection Certificate in terms of the said Regulations. The Committee visited Mount Carmel College Vasanth Nagar, Bengaluru on 17.11.2023 and verified the infrastructure, Buildings, Library, Laboratories, Examination Centre, Sports and recreational facilities. The Committee after going through the presentation, perusal of records, interaction with the Principal, Management

and Faculty members, has submitted the proceedings of the Committee with observation and recommendations.

The Recommendations of the Expert Committee are as under:

***RECOMMENDATION:***

**In view of the observations, the Expert Committee unanimously recommends for issue of No Objection Certificate to Mount Carmel College (Autonomous) for declaration of the Institution as Deemed–to-be University in terms of Section-3 of the UGC Act subject to fulfilment of other requirements of UGC (Institutions Deemed–to-be Universities) Regulations 2023.**

The Recommendations of the Expert Committee are placed before the Syndicate for consideration and approval.

***ವಿವರಣೆ***

ತಾಂತ್ರಿಕ ಶಿಕ್ಷಣ ನಿರ್ದೇಶಕರು ಪ್ರತಿಷ್ಠಿತ ಕಾಲೇಜುಗಳು ವಿಶ್ವವಿದ್ಯಾಲಯ ದೂರವಾಗುತ್ತಿರುವುದು ಶೈಕ್ಷಣಿಕ ಗುಣಮಟ್ಟ ಹಾಗೂ ವಿಶ್ವವಿದ್ಯಾಲಯಗಳ ಹಿತದೃಷ್ಟಿಯಿಂದ ಸರಿಯಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಸದಸ್ಯರ ಭಾವನೆಗಳಿಗೆ ಸ್ಪಂದಿಸಿ ಕೆಲವು ಪ್ರತಿಷ್ಠಿತ ಮಹಾವಿದ್ಯಾಲಯಗಳು ಉನ್ನತ ದರ್ಜೆ ಪಡೆದು ವಿಶ್ವವಿದ್ಯಾಲಯಗಳಾಗಿ ಪ್ರಗತಿ ಹೊಂದುತ್ತಿರುವುದು ಖಂಡಿತವಾಗಿ ಶೈಕ್ಷಣಿಕ ಗುಣಮಟ್ಟದ ವೃದ್ಧಿಯನ್ನು ಸೂಚಿಸುತ್ತದೆ. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ಗೌರವ ಮತ್ತು ಔನ್ನತ್ಯಕ್ಕೆ ಕಾರಣವಾಗಿರುವ ಇಂತಹ ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯದಿಂದ ದೂರವಾಗುತ್ತಿರುವುದು ಕಳವಳಕಾರಿ ಅಂಶವೆಂದು ಅನಿಸಿಕೆ ವ್ಯಕ್ತಪಡಿಸಿದರು. ಸಾಮರ್ಥ್ಯ ಹೊಂದಿದ ಶಿಕ್ಷಣ ಸಂಸ್ಥೆಗಳು ಉನ್ನತ ದರ್ಜೆ ಹೊಂದಲು ಪ್ರೋತ್ಸಾಹಿಸಬೇಕಾಗಿರುವುದು ವಿಶ್ವವಿದ್ಯಾನಿಲಯ ಜವಾಬ್ದಾರಿ ಎಂದು ತಿಳಿಸಿದರು. ಹಾಗಾಗಿ ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯದ ದರ್ಜೆಗೆ ಏರಿದರೆ, ಅದರಲ್ಲಿ ಮಾತೃ ವಿಶ್ವವಿದ್ಯಾಲಯ ಸಾಫಲ್ಯವನ್ನು ಕಾಣಬೇಕೆಂದು ಹೇಳಿದರು.

***ಸಿಂಡಿಕೇಟ್ ತೀರ್ಮಾನ:***

ತಜ್ಞರ ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ಶಿಫಾರಸ್ಸುಗಳನ್ನು ಪರಿಗಣಿಸಿ ಬೆಂಗಳೂರಿನ ಮೌಂಟ್ ಕಾರ್ಮೆಲ್ ಸ್ವಾಯತ್ತ ಮಹಾವಿದ್ಯಾಲಯಕ್ಕೆ ಯುಜಿಸಿಯಿಂದ **Deemed to be University** ಮಾನ್ಯತೆಗಾಗಿ ಅರ್ಜಿಸಲ್ಲಿಸಲು ನಿರಾಕ್ಷೇಪಣಾ ಪತ್ರ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

Item No. 17

Sub: Consideration of the recommendations of the Expert Committee with regard to conferring Autonomous Status to the M.S. Ramaiah College of Arts, Science and Commerce as per Section 64 of the K.S.U. Act 2000 and the UGC (Conferment of Autonomous Status upon Colleges and Measures for Maintenance of Standards of Autonomous Colleges) Regulations-2023.

***REFERENCE NOTE:***

The Principal of M.S. Ramaiah College of Arts, Science and Commerce College, Bengaluru has submitted the proposal along with the UGC letter No.F.2-10/2023/AC-Policy) dated 26.09.2023 conferring the Autonomous Status to M.S. Ramaiah College of Arts, Science and Commerce, Bengaluru for a period of 10 years from the academic year 2023-24 to 2032-33.

The University Grants Commission has accorded the Autonomous Status as per the UGC (Conferment of Autonomous Status upon Colleges and Measures for Maintenance of Standards of Autonomous Colleges) Regulations-2023. However, Section 64 of the Karnataka State Universities Act states that:

> 64(1) "Notwithstanding anything contained in this Act or the Statutes, Ordinances and Regulations made there-under, the University may, with the prior concurrence of the State Government designate for such period as may be specified, an affiliated college, department or units as an Autonomous College for any course of study, after following the procedure and subject to such conditions as may be specified in the Statutes made in this behalf and with a view to improve the quality of education and to introduce new and relevant courses of study."

As per the above provisions concurrence of the State Government is mandatory. In a similar case the Govt. has asked the University to send an Expert Committee to verify the infrastructure and other academic facilities available in the College for continuation Autonomous Status. Accordingly, an Expert Committee is constituted under the Chairmanship of Vice-Chancellor. The Committee visited the College on 18.11.2023 and submitted its report recommending to the Government of Karnataka in Higher Education Department to issue prior concurrence to issue of notification to M.S. Ramaiah College of Arts, Science and Commerce as Autonomous College. The recommendations of the Committee are as under:

***RECOMMENDATIONS:***

The Committee after satisfying the availability of required Physical Infrastructure, Academic facilities, faculty strength and Students admission and examination data, has unanimously resolved to recommend to the Government of Karnataka in Higher Education

Department to issue prior concurrence for Notification of the College as Autonomous College.

The students belonging to the batch of students upto 2023-24 shall follow the University pattern of Course and appear for the University conducted examination. The College shall widely notify the Autonomous Status and admit the students from the academic year 2024-25, subject to the observations made in this report.

The Proceedings of the Expert Committee are placed before the Syndicate for consideration and approval.

*ಸಿಂಡಿಕೇಟ್ ತೀರ್ಮಾನ:*

ತಜ್ಞರ ಸಮಿತಿಯ ವರದಿಯ ಶಿಫಾರಸ್ಸು ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಪರಿಗಣಿಸಿ ನಗರದ ಎಂ. ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದವರು 2023–24 ರಿಂದ 2032–33ರ ಹತ್ತು ವರ್ಷಗಳ ಅವಧಿಗೆ ನೀಡಿರುವ ಸ್ವಾಯತ್ತ ಮಹಾವಿದ್ಯಾಲಯದ ಮಾನ್ಯತೆಯನ್ನು ಪರಿಗಣಿಸಿ ಸರ್ಕಾರದ ಸಹಮತ ಕೋರಿ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಪ್ರಸ್ತುತ 2023–24ನೇ ಸಾಲಿನ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿ ವ್ಯಾಸಂಗದ ಅಂತಿಮ ಹಂತದಲ್ಲಿರುವುದರಿಂದ ಈ ಸಾಲಿನ ವಿದ್ಯಾರ್ಥಿಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷೆಗಳ ವ್ಯಾಪ್ತಿಗೆ ಒಳಪಡಿಸಿ 2024–25ನೇ ಸಾಲಿನ ಪ್ರವೇಶಗಳನ್ನು ಸ್ವಾಯತ್ತ ಮಹಾವಿದ್ಯಾಲಯದ ಅಡಿಯಲ್ಲಿ ಮಾಡಿಕೊಳ್ಳಲು ಸೂಚಿಸಲಾಯಿತು.

2023–24ನೇ ಸಾಲಿನ ವಿದ್ಯಾರ್ಥಿಗಳ ವ್ಯಾಸಂಗ ಪೂರ್ಣಗೊಂಡು ಪದವಿ ಪಡೆಯುವ ವರೆಗೆ ಸಂಯೋಜಿತ ಕಾಲೇಜಿನ ಮಾನ್ಯತೆಗೆ ಮುಂದುವರೆಸಲು ಸೂಚಿಸಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು